ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ. ರಸ್ತೆ, ಬೆಂಗಳೂರು–560 002

ಸಂಖ್ಯೆ : ಸಿಎಸಿ–4/ಬಿ.ಇಡಿ.ದಾಖಲಾತಿ/2011–2012 ದಿನಾಂಕ :

**ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಸೂಚನೆ ಹಾಗೂ ವಿಧಾನ :–**

**ವಿಶೇಷ ಸೂಚನೆ :**

- **ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ವೆಬ್ ಸೈಟ್‌ನಲ್ಲಿ ಬಿತ್ತರಿಸಲಾಗುವ ಅರ್ಜಿಯಲ್ಲಿಯೇ ಭರ್ತಿ ಮಾಡತಕ್ಕದ್ದು, ಬೇರೆ ಯಾವುದೇ ಅರ್ಜಿ ಅಥವಾ ಮುದ್ರಿತ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**
- **ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಓದಿ ನಂತರ ಭರ್ತಿ ಮಾಡುವುದು.**
- **Online ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಈ ಕೆಳಕಂಡ ದೂರವಾಣಿಯ ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆದು ಅರ್ಜಿಯನ್ನು ಸಲ್ಲಿಸಬಹುದಾಗಿದೆ.**

  **ದೂರವಾಣಿ ಸಂಖ್ಯೆಗಳು :– 08197214463, 08197214464**
- **ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಅರ್ಜಿಯ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ.**
- **ನಿಗಧಿತ ದಿನಾಂಕದ ನಂತರ ಶುಲ್ಕವನ್ನು ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹೊರತು ಪಡಿಸಿ ಬೇರೆ ಯಾವುದೇ ಬ್ಯಾಂಕ್‌ನಲ್ಲಿ ಹಣ ಪಾವತಿಸತಕ್ಕದಲ್ಲ.**
- **ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಸಮಯದಲ್ಲಿ ವಿದ್ಯುತ್ ಕಡಿತಗೊಂಡಲ್ಲಿ ಅಥವಾ ಇತರೆ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ ಮತ್ತೆ ಅರ್ಜಿಯನ್ನು ಭರ್ತಿ ಮಾಡುವ ಕಾರ್ಯವನ್ನು ಮುಂದುವರೆಸಲು ಅವಕಾಶ ಕಲ್ಪಿಸಲಾಗಿದೆ.**
- **ಒಂದು ವೇಳೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ತಿದ್ದುಪಡಿ ಮಾಡುವ ಅಗತ್ಯತೆ ಕಂಡು ಬಂದಲ್ಲಿ ಹೊಸ ಅರ್ಜಿಯನ್ನು ಸಲ್ಲಿಸತಕ್ಕದ್ದು.**
- **ನಿಗಧಿತ ದಿನಾಂಕದ ನಂತರ ಶುಲ್ಕವನ್ನು ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹೊರತು ಪಡಿಸಿ ಬೇರೆ ಯಾವುದೇ ಬ್ಯಾಂಕ್‌ನಲ್ಲಿ ಹಣ ಪಾವತಿಸತಕ್ಕದಲ್ಲ.**
- **ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿಗಳು ದೋಷಪೂರಿತ ಹಾಗೂ ತಪ್ಪು ಮಾಹಿತಿಗಳನ್ನು ಒಳಗೊಂಡಿದ್ದಲ್ಲಿ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ ಹಾಗೂ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

# ಅರ್ಜಿಯನ್ನು ಭರ್ತಿ ಮಾಡುವ ಮುನ್ನ

ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು, ಅಭ್ಯರ್ಥಿಯ ಸಹಿಯನ್ನು ಹಾಗೂ ಎಡಗೈ ಹೆಬ್ಬೆರಳಿನ ಗುರುತನ್ನು ಸ್ಕ್ಯಾನ್ ಮಾಡಿ **UPLOAD** ಮಾಡಲು ಸಿದ್ಧವಾಗಿಟ್ಟುಕೊಂಡಿರಬೇಕು.

**ಅರ್ಜಿಯನ್ನು ಭರ್ತಿ ಮಾಡುವುದು.**

1. www.trsforms.com/cac/main.asp ರ ವೆಬ್‌ಸೈಟ್‌ನಲ್ಲಿ **ONLINE APPLICATION** ಎಂಬ ಶಿರ್ಷಿಕೆಯನ್ನು ಕ್ಲಿಕ್ ಮಾಡಿ ಅರ್ಜಿಯನ್ನು ಭರ್ತಿ ಮಾಡುವುದು.

2. ಅರ್ಜಿಯನ್ನು ಭರ್ತಿ ಮಾಡಿದ ನಂತರ ಶುಲ್ಕವನ್ನು (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳನ್ನು ಹೊರತುಪಡಿಸಿ) ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆಗಳಲ್ಲಿ ಮಾತ್ರ ಈ ಸಂಬಂಧ ಮುದ್ರಿತವಾದ ಚಲನ್ (ತ್ರಿ ಪ್ರತಿಯಲ್ಲಿ) ಅನ್ನು ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಪಾವತಿಸತಕ್ಕದ್ದು.

3. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳನ್ನು ಹೊರತು ಪಡಿಸಿ ಇತರೆ ಅಭ್ಯರ್ಥಿಗಳು **ನಿಗಧಿತ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕ್‌ನ ಶಾಖೆಗಳಲ್ಲಿ ನಿಗಧಿತ ಚಲನ್ ಮೂಲಕ ಪಾವತಿಸಿದ ನಂತರ ಮೇಲ್ಕಂಡ ವೆಬ್ ಸೈಟ್‌ನಲ್ಲಿ Journal Number Entry ಎಂಬ ಬಟನ್ ಕ್ಲಿಕ್ ಮಾಡಿ ಮಾಹಿತಿಯನ್ನು ಭರ್ತಿ ಮಾಡಿ ಅರ್ಜಿಯನ್ನು ಮುದ್ರಿಸಿಕೊಳ್ಳತಕ್ಕದ್ದು.**

4. **ಎಲ್ಲ ಅರ್ಹ ಅಭ್ಯರ್ಥಿಗಳು ದಾಖಲಾತಿಯ ಸಮಯದಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿ ಅರ್ಜಿ ಶುಲ್ಕವನ್ನು ಪಾವತಿಸಿರುವ ಚಲನ್ ಪ್ರತಿಯನ್ನು ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.**

5. **ಮುದ್ರಿತ ಅರ್ಜಿಯು ಒಂದು ವೇಳೆ ಕಳೆದು ಹೋದಲ್ಲಿ ಮೇಲ್ಕಂಡ ವೆಬ್‌ಸೈಟ್‌ನಲ್ಲಿ Re-Print Application ಎಂಬ ಬಟನ್ ಕ್ಲಿಕ್ ಮಾಡಿ ಪ್ರತಿಯನ್ನು ಪಡೆದುಕೊಳ್ಳತಕ್ಕದ್ದು.**

**ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಹಂತ :-**

**1. ಭಾವ ಚಿತ್ರ, ಅಭ್ಯರ್ಥಿಯ ಸಹಿ ಹಾಗೂ ಎಡಗೈ ಹೆಬ್ಬಿಟ್ಟಿನ ಗುರುತನ್ನು ಅಪ್ ಲೋಡ್ (Upload) ಮಾಡಲು ಸಿದ್ಧಪಡಿಸಿಕೊಳ್ಳುವ ವಿಧಾನ :-**

ಇತ್ತೀಚಿನ ಭಾವಚಿತ್ರವನ್ನು ಒಂದು ಬಿಳಿ ಹಾಳೆಯ ಮೇಲಿಟ್ಟು ಸ್ಕ್ಯಾನ್ ಮಾಡಿ **Image** ಸೃಷ್ಟಿಸಿಕೊಳ್ಳತಕ್ಕದು. ಮತ್ತೊಂದು ಬಿಳಿಯ ಹಾಳೆಯಲ್ಲಿ ಕಪ್ಪು ಸ್ಕೆಚ್ ಪೆನ್ ಅಥವಾ ಮಾರ್ಕರ್ ಪೆನ್‌ನಲ್ಲಿ ನಿಮ್ಮ ಸಹಿಯನ್ನು ಮಾಡಿ ಅದೇ ಬಿಳಿಯ ಹಾಳೆಯಲ್ಲಿ ನಿಮ್ಮ ಎಡಗೈ ಹೆಬ್ಬೆರಳಿನ ಗುರುತನ್ನು ಮುದ್ರಿಸಿಕೊಂಡು ಸ್ಕ್ಯಾನ್ ಮಾಡಿ ಮತ್ತೊಂದು **Image** ಸೃಷ್ಟಿಸಿಕೊಳ್ಳತಕ್ಕದು. ಈ ಎರಡು **Image** ಗಳನ್ನು **JPEG** ಅಥವಾ **JIF** ಫಾರ್ಮ್ಯಾಟ್‌ನಲ್ಲಿ ಇರತಕ್ಕದ್ದು.

**ಈ ಕೆಳಗೆ ನಮೂದಿಸಿರುವ ತಾಂತ್ರಿಕ ವಿಷಯಗಳಂತೆ ನಿಮ್ಮ ಭಾವಚಿತ್ರ, ಸಹಿಯನ್ನು ಹಾಗೂ ಎಡಗೈ ಹೆಬ್ಬೆಟ್ಟಿನ ಗುರುತನ್ನು ಸ್ಕ್ಯಾನ್ ಮಾಡಿ.**

**ಕಡತದ ಗಾತ್ರ < 100 ಕೆ.ಬಿ**

**ಡಿಪಿಐ ಸೆಟ್ಟಿಂಗ್ = 100 ಡಿಪಿಐ**

**ಪ್ರತಿಬಿಂಬದ ಅಳತೆ = 100%**

**ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಪ್ರಮಾಣ ಮತ್ತು ತಾಂತ್ರಿಕ ವಿಶಿಷ್ಟತೆಗಳು :-**

**45 ಎಂಎಂ (ಎತ್ತರ) X 35 ಎಂಎಂ (ಅಗಲ)**

**ಸಹಿಯ ಪ್ರಮಾಣ :-**

**20 ಎಂಎಂ (ಎತ್ತರ) X 35 ಎಂಎಂ (ಅಗಲ)**

**ಎಡಗೈ ಹೆಬ್ಬಿಟ್ಟಿನ ಪ್ರಮಾಣ :-**

**45 ಎಂಎಂ (ಎತ್ತರ) X 35 ಎಂಎಂ (ಅಗಲ)**

**2. ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ವಿದಾನ :-**

(1) ಅಭ್ಯರ್ಥಿಗಳು ಆನ್‌ಲೈನ್ (Online)ನಲ್ಲಿ ಅರ್ಜಿ ಭರ್ತಿ ಮಾಡಲು ವೆಬ್ ಸೈಟ್ ವಿಳಾಸ **www.trsforms.com/cac/main.asp** ರಲ್ಲಿನ ಎಡಬದಿಯ ಸಾಲಿನಲ್ಲಿರುವ ಬಟನ್‌ಗಳ ಪೈಕಿ **Online Application** ಕ್ಲಿಕ್ ಮಾಡುವುದು.

(2) ನಂತರ ಗಣಕಯಂತ್ರದ ಪರದೆಯಲ್ಲಿ ಪ್ರಕಟವಾಗುವ ಅರ್ಜಿಯಲ್ಲಿಯೇ ಅಗತ್ಯ ವಿವರಗಳನ್ನು ಭರ್ತಿಮಾಡುವುದು.

(3) ಎಲ್ಲಾ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡಿದ ನಂತರ ತಪ್ಪದೇ ನಿಗಧಿತ ಅರ್ಜಿಯ ಕೊನೆಯಲ್ಲಿರುವ Upload Photo ಕ್ಲಿಕ್ ಮಾಡಿ ಈ ಮೊದಲೇ ಸ್ಕ್ಯಾನ್ ಮಾಡಿಕೊಂಡಿರುವ ಭಾವ ಚಿತ್ರದ **Image** ನ್ನು **Upload** ಮಾಡಬೇಕು ಈ ಪ್ರಕ್ರಿಯೆ ಮುಗಿದ ನಂತರ ಗಣಕಯಂತ್ರದ ಪರದೆಯ ಮೇಲೆ Main Application Screen ಪ್ರಕಟವಾಗುವುದು, ತದನಂತರ Upload Signature and Thumb impression ಕ್ಲಿಕ್ ಮಾಡಿ ಸಹಿ ಹಾಗೂ ಎಡಗೈ ಹೆಬ್ಬೆಟ್ಟಿನ **Image** ನ್ನು **Upload** ಮಾಡಬೇಕು. (ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಯನ್ನು ಮಾತ್ರ ದಾಖಲಾತಿಗೆ ಪರಿಗಣಿಸಲಾಗುವುದು, ಬೇರಾವುದೇ ಅರ್ಜಿಗಳನ್ನು ಪರಗಣಿಸಲಾಗುವುದಿಲ್ಲ )

(4) ಅರ್ಜಿಯನ್ನು ಭರ್ತಿ ಮಾಡುವ ಮುನ್ನಾ ಎಲ್ಲ ಅಭ್ಯರ್ಥಿಗಳು **Register Application** ಬಟನ್ ಕ್ಲಿಕ್ ಮಡುವ ಮುನ್ನಾ ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿಯ ಬಗ್ಗೆ ಗಣಕಯಂತ್ರದ ಪರದೆಯ ಮೇಲೆ ಸಂಪೂರ್ಣವಾಗಿ ಪರಿಶೀಲಿಸಿಕೊಳ್ಳತಕ್ಕದ್ದು. ಸದರಿ ಬಟನ್ ಕ್ಲಿಕ್ ಮಾಡಿದ ನಂತರ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

(5) ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳು **Online** ನಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ನಂತರ ಮಾಹಿತಿ ಭರ್ತಿ ಮಾಡಿರುವುದನ್ನು ಜಾಗರೂಕತೆಯಿಂದ ಸರಿಯಾಗಿದೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಂಡು ಮೇಲ್ಕಂಡ ವೆಬ್ ಸೈಟ್‌ನ ಎಡಬದಿಯ ಸಾಲಿನಲ್ಲಿರುವ ಬಟನ್‌ಗಳ ಪೈಕಿ Register Application ಬಟನ್ ಕ್ಲಿಕ್ ಮಾಡಿದಾಗ ಅಭ್ಯರ್ಥಿಯು ಭರ್ತಿ ಮಾಡಿದ ಆನ್‌ಲೈನ್ ಅರ್ಜಿ ಪ್ರಕಟವಾಗುತ್ತದೆ. (**Register Application ಕ್ಲಿಕ್ ಮಾಡಿದ ನಂತರ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ)** ಈ ಅರ್ಜಿ ನಮೂನೆಯಲ್ಲಿ 06 ಅಂಕಿಗಳ (ಉದಾಹರಣೆ : 789612) ಅರ್ಜಿಯ ಸಂಖ್ಯೆ ಇರುತ್ತದೆ. ಮುಂದಿನ ಯಾವುದೇ ವ್ಯವಹಾರಗಳಲ್ಲಿ ಈ ಸಂಖ್ಯೆಯನ್ನು ಬಳಸತಕ್ಕದ್ದು. ಈ ಅರ್ಜಿ ನಮೂನೆಯ ಕೊನೆಯಲ್ಲಿ **Click here to print the page** ಎಂದು ಇರುತ್ತದೆ. ಇಲ್ಲಿ ಕ್ಲಿಕ್ ಮಾಡಿ ಭರ್ತಿ ಮಾಡಿದ ನಿಮ್ಮ ಅರ್ಜಿಯನ್ನು ಮುದ್ರಿಸಿ ತೆಗೆದುಕೊಳ್ಳತಕ್ಕದ್ದು. ಈ ಮುದ್ರಿತ ಅರ್ಜಿಯನ್ನು ದಾಖಲಾತಿಯ ಸಮಯದಲ್ಲಿ ತಪ್ಪದೇ ಹಾಜರುಪಡಿಸತಕ್ಕದ್ದು.

(6) ಪರಿಶಿಷ್ಟ ಜಾತಿ , ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳನ್ನು ಹೊರತು ಪಡಿಸಿ ಇತರೆ ಅಭ್ಯರ್ಥಿಗಳು **Online** ನಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ನಂತರ ಮಾಹಿತಿ ಭರ್ತಿ ಮಾಡಿರುವುದನ್ನು ಜಾಗರೂಕತೆಯಿಂದ ಸರಿಯಾಗಿದೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಂಡು **Register Application** ಬಟನ್ ಮೇಲೆ ಕ್ಲಿಕ್ ಮಾಡುವುದು. ಸದರಿ ಬಟನ್ ಕ್ಲಿಕ್ ಮಾಡಿದ ಮೇಲೆ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ. **Register Application** ಬಟನ್ ಮೇಲೆ ಕ್ಲಿಕ್ ಮಾಡಿದ ಮೇಲೆ ಹಣ ಸಂಧಾಯ ಮಾಡುವ ಖಾತೆಯ ಸಂಖ್ಯೆಯನ್ನು ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕ್ ಚಲನ್ ಪ್ರಕಟವಾಗುತ್ತದೆ. ಈ ಬ್ಯಾಂಕ್ ಚಲನ್ **1) ಬ್ಯಾಂಕ್ ಪ್ರತಿ 2) ಅಭ್ಯರ್ಥಿಯ ಪ್ರತಿ 3) ವಿಶೇಷಾಧಿಕಾರಿಗಳ / ನೋಡಲ್ ಕೇಂದ್ರದ ಪ್ರತಿ** ಎಂಬ ಮೂರು ಭಾಗಗಳನ್ನು ಹೊಂದಿರುತ್ತದೆ. **Click here to Print the page** ಬಟನ್ ಕ್ಲಿಕ್ ಮಾಡಿ ಚಲನ್ ಪ್ರತಿಯನ್ನು ಮುದ್ರಿಸಿಕೊಂಡು, (Register Application ಕ್ಲಿಕ್ ಮಾಡಿದ ನಂತರ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ) ಸದರಿ ಚಲನ್ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ರಾಜ್ಯದ ಯಾವುದೇ ಶಾಖೆಯಲ್ಲಿ **ಅರ್ಜಿ ಶುಲ್ಕ ರೂ. 200-00** ಗಳನ್ನು ನಿಗಧಿತ ದಿನಾಂಕದೊಳಗಾಗಿ ಪಾವತಿಸಿ ಅಭ್ಯರ್ಥಿಯ ಪ್ರತಿ ಹಾಗೂ ವಿಶೇಷಾಧಿಕಾರಿಗಳ / ನೋಡಲ್ ಕೇಂದ್ರದ ಪ್ರತಿಗಳನ್ನು ಬ್ಯಾಂಕ್ ರವರಿಂದ ಪಡೆದುಕೊಂಡು ದಾಖಲಾತಿಯ ಸಮಯದಲ್ಲಿ ವಿಶೇಷಾಧಿಕಾರಿಗಳ / ನೋಡಲ್ ಕೇಂದ್ರದ ಪ್ರತಿಯನ್ನು ಹಾಜರುಪಡಿಸತಕ್ಕದ್ದು.

(7) ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳನ್ನು ಹೊರತು ಪಡಿಸಿ ಇತರೆ ಅಭ್ಯರ್ಥಿಗಳು ನಿಗಧಿತ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆಯಲ್ಲಿ ನಿಗಧಿತ ಚಲನ್ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಮೇಲ್ಕಂಡ ವೆಬ್ ಸೈಟ್‌ನಲ್ಲಿ Journal Number Entry ಕ್ಲಿಕ್ ಮಾಡತಕ್ಕದ್ದು. ಸದರಿ Journal Number Entry ಕ್ಲಿಕ್ ಮಾಡಿದ ನಂತರ ಒಂದು ನಮೂನೆಯು (Form) ಗಣಕಯಂತ್ರದ ಪರದೆಯ ಮೇಲೆ

ಪ್ರಕಟವಾಗುವುದು, ಸದರಿ ನಮೂನೆಯಲ್ಲಿ ಅರ್ಜಿ ಸಂಖ್ಯೆ, ಹುಟ್ಟಿದ ದಿನಾಂಕ ಮತ್ತು ಬ್ಯಾಂಕ್ ಚಲನ್‌ರಲ್ಲಿ ನಮೂದಿಸಿರುವ Journal Number ಗಳನ್ನು ಭರ್ತಿ ಮಾಡಿ Get Application ಎಂಬ ಬಟನ್ ಕ್ಲಿಕ್ ಮಾಡಿ ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಳ್ಳತಕ್ಕದ್ದು. ಈ ಅರ್ಜಿ ನಮೂನೆಯಲ್ಲಿ 06 ಅಂಕಿಗಳ (ಉದಾಹರಣೆ : 789612) ಅರ್ಜಿಯ ಸಂಖ್ಯೆ ಇರುತ್ತದೆ. ಮುಂದಿನ ಯಾವುದೇ ವ್ಯವಹಾರಗಳಲ್ಲಿ ಈ ಸಂಖ್ಯೆಯನ್ನು ಬಳಸತಕ್ಕದ್ದು ಹಾಗೂ ಈ ಪ್ರತಿಯನ್ನು ದಾಖಲಾತಿಯ ಸಮಯದಲ್ಲಿ **ತಪ್ಪದೇ** ಹಾಜರುಪಡಿಸತಕ್ಕದ್ದು.

(8) ಮೇಲ್ಕಂಡ ಕ್ರಮಗಳ ನಂತರ ಪ್ರಕ್ರಿಯೆ ಮುಕ್ತಾಯವಾಗುವುದು.